**ಬೆಂಗಾಡಿನ ಬಯಲುಸೀಮೆಯೊಳಗಿನ ಅಪ್ಪಟ ಮಲೆನಾಡಿನ ಆ ಸುತ್ತು ಕಣಿವೆಯ ದಾರಿಯಲ್ಲಿ ಪೂಂಗೊಡಿಯನ್ನು ತನ್ನ ಯೆಝ್ಡಿ ಬೈಕಿನಲ್ಲಿ ಕೂರಿಸಿಕೊಂಡು ಅಡ್ಡಾಡಿದ ನೆನಪು ಆವರಿಸಿಕೊಳ್ಳುತ್ತಿದ್ದಂತೆ ಮನವಾಳನ್ ಮನಸು ದಿಮ್ಮಗಾಗತೊಡಗಿತು. ನೆನಪುಗಳು ಕಣ್ಣಿಗೆ ಇಳುಕೊಳ್ಳತೊಡಗಿದವು.**

ಆ ಚೂರುಗಳನ್ನೆಲ್ಲಾ ಬೊಗಸೆಗಾಕಿಕೊಂಡು, ಕಡೆಗೆ ಕಾರಿನ ಕಿಟಕಿಯಾಚೆಗೆ ಬೊಗಸೆಯನ್ನಿಟ್ಟು ಆ ಚೂರುಳನ್ನೆಲ್ಲಾ ಗಾಳಿಗಾರಿಬಿಟ್ಟ. ಅವುಗಳಲ್ಲಿ ಕೆಲವು ಪಟಪಟನೆ ಸದ್ದು ಮಾಡುತ್ತಾ ಸಿಕ್ಕ ಸಿಕ್ಕ ಗಿಡಮರಗಳ ಎಲೆಗಳ ಮೇಲೆ ಕ್ಷಣ ಹೊತ್ತು ಕೂರುತ್ತಾ, ಕಾಗದದ ಹಕ್ಕಿಗಳಂತೆ ತೇಲುತ್ತಾ ಹೋಗುತ್ತಿದ್ದರೆ, ಮತ್ತೆ ಕೆಲವು ನೆಲಕ್ಕುದುರಿ ಅಲ್ಲೇ ಕೂತು ಗುರುತುಗಳಾಗುತ್ತಿದ್ದವು. ಅವುಗಳ ಮೇಲೆ ಸಂಜೆಯ ಸೂರ್ಯ ಠಸ್ಸೆಯೊತ್ತುತ್ತಿದ್ದ.

ಇನ್ನೊಂದು ತಿರುವನ್ನು ತಿರುವಿ ಇಳಿದರೆ ಸುತ್ತು ಕಣಿವೆ ಮುಗಿದು ಸಪಾಟು ದಾರಿ ಶುರುವಾಗಬೇಕು ಅನ್ನುವಷ್ಟರಲ್ಲಿ ಮನವಾಳನ್ ಇದ್ದಕ್ಕಿದ್ದಂತೆ ತನ್ನಿಂದ ಬಲಭಾಗಕ್ಕಿದ್ದ ಗುಡ್ಡವೊಂದನ್ನು ತೋರಿಸುತ್ತಾ 'ಅದನ್ನ ಮದ್ಲಿಂಗನ ಗುಡ್ಡ ಅಂತಾ ಕರೀತಾರೆ, ನಾವೀಗ ಹತ್ತಿ ಇಳುದ್ವಲ್ಲ ಅದ್ಕೆ ಮದ್ಲಿಂಗನ ಕಣಿವೆ ಅಂತಾರೆ' ಒಂದೇ ಉಸುರಿಗೆ ಡ್ರೈವರನಿಗೆ ಹೇಳಿದ. ಕೋಯಾಗೆ ಅದರ ತಲೆ ಬುಡ ತಿಳಿಯದೆ ಮನವಾಳನ್‌ನನ್ನೇ ದಿಟ್ಟಿಸಿದ. 'ಒಂದಿನ ಹೊಸ್ದಾಗಿ ಮದ್ವೆ ಆಗಿದ್ದ ಮದ್ಲಿಂಗ ಅನ್ನೋನು ಹೆಂಡ್ತಿ, ನಾದ್ನಿ, ಅತ್ತೇರ ಜೊತೇಲಿ ನಾವು ಬಂದ್ವಲ್ಲ ಈ ದಾರೀಲೇ ಬರ್ತಿದ್ನಂತೆ. ಅಕ್ಕ ತಂಗಿ ಅಂದ್ರೆ ಒಬ್ರುನ್ನ ಬಿಟ್ಟು ಒಬ್ರು ಇರ್ತಿರ್ಲಿಲ್ವಂತೆ. ಮದ್ವೆ ಆಗಿ ಗಂಡನ ಮನೆಗೆ ಹೋದ್ಮೇಲೆ ತಂಗಿ ತನ್ನಿಂದ ದೂರಾಗಿಬಿಡ್ತಾಳೆ ಅನ್ನೋ ಸಂಕಟಕ್ಕೆ ಬೀಳ್ತಾಳೆ ಅಕ್ಕ. ತಂಗೀನೂ ತನ್ನ ಗಂಡನೇ ಮದ್ವೆಯಾದ್ರೆ ಕೊನೇತನ್ಕ ಇಬ್ರೂ ಒಟ್ಗೇ ಇರ್ಬಹುದಲ್ಲಾ ಅಂತ ಅನ್ಸುತ್ತೆ ಅಕ್ಕನಿಗೆ. ಹಂಗಂತ ಅವಳ ಅವ್ವನಿಗೆ ಹೇಳ್ತಾಳಂತೆ. ತಂಗೀನೂ ತುಂಬಾ ಚಂದ ಇದ್ಲಂತೆ. ಮದ್ಲಿಂಗನ್ಗೂ ಅವಳ ಮೇಲೆ ಮನಸಿತ್ತಂತೆ. ಮಗಳ ಮಾತಿಗೆ ಅವಳವ್ವ, ಅಗೋ ನೋಡು ಆ ಗುಡ್ಡ ಇದ್ಯಲ್ಲ ಅದನ್ನ ಇಮ್ಮುರಿಕೆಯಾಗಿ ಹತ್ತಿ ಇಮ್ಮುರಿಕೆಯಾಗಿ ಇಳ್ದು ಬಂದ್ರೆ ಎರಡ್ನೇ ಮಗುಳ್ನೂ ಮದ್ವೆ ಮಾಡಿ ಕೊಡ್ತೀನಿ ಅಂತಾ ಅಳಿಯನಿಗೆ ಆಕ್ಸಾಲಕ್ಕೆ ಹೇಳ್ತಾಳಂತೆ. ಆಗ ಅದನ್ನೇ ಸವಾಲು ಅಂದ್ಕೊಂಡ ಮದ್ಲಿಂಗ ಆ ಗುಡ್ಡಾನ ಹಿಮ್ಮುರಿಕೆಯಾಗಿ ಹತ್ತಿ ಹಿಮ್ಮುರಿಕೆಯಾಗಿ ಇಳಿದು ಬಿಡ್ತಾನೆ. ಆದ್ರೆ ಇಳ್ಯೋವಷ್ಟತ್ಗೆ ಅವ್ನಿಗೆ ಪ್ರಾಣ ಹೋಗೋವಷ್ಟು ಬಾಯಾರಿಕೆಯಾಗಿಬಿಡುತ್ತಂತೆ. ನೀರು ನೀರು ಅಂತ ಕೂಗಿಕೊಳ್ತಾನಂತೆ. ನಾದ್ನಿ ಒಂದು ಚೊಂಬಲ್ಲಿ ನೀರ ತಗಂಡು ಅವ್ನ ಹತ್ರುಕೆ ಹೋಗ್ತಾಳೆ. ಇನ್ನೇನು ಚೊಂಬ್ನ ಅವ್ನ ಕೈಗೆ ಕೊಡ್ಬೇಕು ಅನ್ನೋವಷ್ಟರಲ್ಲಿ ಗಡಿಬಿಡೀಲಿ ಚೊಂಬ್ನ ಕೆಳೀಕೆ ಎತ್ತಾಕಿಬಿಡ್ತಾಳಂತೆ. ಅದ್ರಾಗೆ ಇದ್ದ ನೀರೆಲ್ಲಾ ಒಂತೊಟ್ಟೂ ಇಲ್ದಂಗೆ ಚೆಲ್ಲಿ ಹೋಗಿಬಿಡುತ್ತಂತೆ. ಅಲ್ಲಿ ಸುತ್ಲೂ ಎಲ್ಲಿ ಹುಡುಕಿದ್ರೂ ಒಂದು ಹನಿ ನೀರು ಸಿಗ್ಲಿಲ್ವಂತೆ. ಹಂಗಾಗಿ ಮದ್ಲಿಂಗ ನೀರಿಲ್ದೆ ಸತ್ತೇ ಬಿಡ್ತಾನಂತೆ. ಆವತ್ನಿಂದ ಈ ಗುಡ್ಡಕ್ಕೆ ಮದ್ಲಿಂಗನ ಗುಡ್ಡ ಅಂತ್ಲೂ, ಈ ಕಣಿವೆಗೆ ಮದ್ಲಿಂಗನ ಕಣಿವೆ ಅಂತ್ಲೂ ಹೆಸ್ರು ಬಂತಂತೆ'. ತನಗೇ ತಾನು ಹೇಳಿಕೊಂಡವನಂತೆ ಮನವಾಳನ್ ಒಂದೇ ಉಸುರಿಗೆ ಮಾತನಾಡಿದ. ಕೋಯಾನಿಗೆ ಏನೊಂದೂ ಮಾತಾಡಲಾಗಲಿಲ್ಲ. 'ಆ ಮದ್ಲಿಂಗ ಮೋಹಕ್ಕೆ ಬೀಳ್ದೇ